# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ ರಾಣೆಬೆನ್ನೂರು</u>

**<u>ಸಿ.ಸಿ.151/2023</u>**

ಪಿರ್ಯಾಧಿ : ಅಬಕಾರಿ ಉಪ ನಿರೀಕ್ಷಕರು,
ರಾಣೆಬೆನ್ನೂರು ವಲಯ.

**ವಿರುದ್ಧ**

ಆರೋಪಿತರು: ನಾಗರಾಜ ತಂದೆ ಹನುಮಂತಪ್ಪ ಕಕ್ಕರಗೋಳ,
ವಯಸ್ಸುಃ 42 ವರ್ಷ, ವಾಸಃ ಯಕ್ಲಸಾಪುರ,
ತಾಃ ರಾಣೆಬೆನ್ನೂರು, ಜಿಃ ಹಾವೇರಿ.

**<u>ಕಲಂ 313 ಅಡಿಯಲ್ಲಿ ಆರೋಪಿಯ ಹೇಳಿಕೆ</u>**

**ಪ್ರಶ್ನೆ 1 :–** ಸಾಕ್ಷಿದಾರರು ತಮ್ಮ ವಿಚಾರಣೆಯಲ್ಲಿ ಹೇಳಿರುವುದನ್ನು ಕೇಳಿಸಿಕೊಂಡಿದ್ದೀರಾ ?

ಉತ್ತರ :–

**ಪ್ರಶ್ನೆ 2 :– ಫ್ರಾಸಾ–1 ಶಂಕರ ಗುಡದಾರ ಹಾಗೂ ಫ್ರಾಸಾ–5 ಹನುಮಂತಪ್ಪ ನಾಗಪ್ಪರವರು ತಮ್ಮ ಸಾಕ್ಷ್ಯದಲ್ಲಿಃ–** ದಿನಾಂಕ 11.04.2023 ರಾತ್ರಿ ಸುಮಾರು 07-10 ಘಂಟೆಗೆ ವಿಧಾನ ಸಭಾ ಚುನಾವಣೆ 2023 ರ ನೀತಿ ಸಂಹಿತೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ಅವರು ಮೇಡ್ಲೇರಿ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಸದರಿ ಗ್ರಾಮದ ಬಸ್ ಸ್ಟ್ಯಾಂಡ್ ಮುಂದೆ ಆರೋಪಿತರಾದ ನೀವು ಒಂದು ಗೊಬ್ಬರದ ಚೀಲದಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಮದ್ಯ ಸಾಗಾಟ ಮಾಡುತ್ತಿರುವಾಗ ಸಿಕ್ಕಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ, **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :–

**ಪ್ರಶ್ನೆ 3 :–ಮುಂದುವರೆದು**, ಸದರಿ ಚೀಲವನ್ನು ಪರಿಶೀಲಿಸಿದಾಗ 90 ಮಿಲಿಯ 144 ಹೈವರ್ಡ್ ಚೀಯರ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್‌ಗಳು, 90 ಮಿಲಿಯ 10 ಮ್ಯಾಕಿನ್‌ಟೋಶ್ ವಿಸ್ಕಿ ಟೆಟ್ರಾ ಪ್ಯಾಕುಗಳು ಇರುವುದು ಕಂಡುಬಂದಿರುತ್ತದೆ. ನಂತರ ಮದ್ಯವನ್ನು ಅಮಾನತುಪಡಿಸಿಕೊಂಡು, ಪಂಚನಾಮೆ ತಯಾರಿಸಿ, ಠಾಣೆಗೆ ಬಂದು ದೂರು ದಾಖಲಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ .

**ಉತ್ತರ** :–

**ಪ್ರಶ್ನೆ 4 :–ಫ್ರಾಸಾ–3 ದಾದಾಪೀರ್ ಹರಿಹರ ಇವರು ತಮ್ಮ ಸಾಕ್ಷ್ಯದಲ್ಲಿಃ–** ದಿನಾಂಕ 01.06.2023 ರಂದು ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಸ್ವೀಕರಿಸಿ, ತನಿಖೆ ಮುಂದುವರೆಸಿ, ಘಟನಾಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ನಿಮ್ಮ ಹೇಳಿಕೆ ಪಡೆದುಕೊಂಡು ಮುದ್ದೆ ಮಾಲನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಿ, ವರದಿ ಪಡೆದುಕೊಂಡು, ನಿಮ್ಮ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :-

**ಪ್ರಶ್ನೆ 5 :–** ನಿಮ್ಮ ಪರವಾಗಿ ಏನಾದರೂ ಹೇಳುವುದಿದೆಯಾ?

ಉತ್ತರ :–

**ಪ್ರಶ್ನೆ 6 :–** ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

ಉತ್ತರ :–

**(ಮೇಲಿನ ಕಲಂ 313 ಹೇಳಿಕೆಯನ್ನು ಆರೋಪಿತನಿಗೆ ಓದಿ ಹೇಳಿದಾಗ ಆರೋಪಿಯು ನೀಡಿದ ಉತ್ತರವನ್ನು ಯಥವತ್ತಾಗಿ ದಾಖಲಿಸಿಕೊಳ್ಳಲಾಯಿತು)**

ದಿನಾಂಕಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ರಾಣೆಬೆನ್ನೂರು

**ಆರೋಪಿತನ ಸಹಿಃ**